StudentBounty.com



Register Number

# Language — Part I — KANNADA — Paper I

Time Allowed : 3 Hours ] [ Maximum Marks : 100

I. ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ನಾಲ್ಕು ಸಾಲುಗಳಿಗೆ ಮೀರದಂತೆ ಉತ್ತರಿಸಿ : $4 \times 2 = 8$

1. ಜಲಚಕ್ರ ಎಂದರೇನು ?
2. ಭಗೀರಥನು ಏಕೆ ತಪಸ್ಸು ಮಾಡಿದನು ?
3. ಕರಿಯಪ್ಪನಿಗೆ ಸಂಸಾರ ದುರ್ಭರವೆನಿಸಲು ಕಾರಣವೇನು ?
4. ಚಂದ್ರನ ಬಗ್ಗೆ ನಮಗೆ ದೊರೆತಿರುವ ಮಾಹಿತಿಗಳೇನು ?
5. ಕಬೀರದಾಸರು ಮನುಷ್ಯ ಸ್ವಭಾವವನ್ನು ಹೇಗೆ ವರ್ಣಿಸಿದ್ದಾರೆ ?
6. ದ್ರುಪದನು ತನ್ನ ಮಗಳ ಸ್ವಯಂವರಕ್ಕಾಗಿ ಏನು ಮಾಡಿದನು ?

II. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಹತ್ತು ಸಾಲುಗಳಿಗೆ ಮೀರದಂತೆ ಉತ್ತರಿಸಿ : $3 \times 4 = 12$

1. ನಾಗಿ ಬಿಕ್ಕಿ ಬಿಕ್ಕಿ ಅಳಲು ಕಾರಣವೇನು ?
2. ದೇವರ ಗುಡಿಯನ್ನು ನೋಡಿದಾಗ ಕವಿಗೆ ಯಾವ ಭಾವನೆ ಮೂಡಿತು ?
3. ಕವಿಗೆ ಹಿಂದಿನ ಮನೆಗಳಲ್ಲಾದ ಕಹಿ ಅನುಭವಗಳೇನು ?
4. ವಾಲ್ಮೀಕಿ ಜಾನಕಿಗೆ ಹೇಳಿದ ಮಾತುಗಳೇನು ?
5. ಜನರ ಹೋರಾಟದ ಪರಿಣಾಮವೇನಾಯಿತು ?

III. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಹತ್ತು ಸಾಲುಗಳಿಗೆ ಮೀರದಂತೆ ಉತ್ತರಿಸಿ : $3 \times 4 = 12$

1. ಮೇಲುಕೋಟೆಯಲ್ಲಿ ಅಕ್ಕತಂಗಿಯರ ಕೊಳದ ಬಗ್ಗೆ ಇರುವ ಕಥೆಯೇನು ?
2. ಧರ್ಮದ ನಿಲುವು ಏನೆಂದು ವಿಷದಪಡಿಸಿ.
3. ತಂದೆ ಮಗನಲ್ಲಿ ಯಾರು ಹೆಚ್ಚು ಸಂಸ್ಕೃತಿ ಸಂಪನ್ನರು ? ಏಕೆ ?

[ Turn over

www.StudentBounty.com
Homework Help & Pastpapers

4. ಅರ್ಜುನನು ಸ್ವಯಂವರ ಮಂಟಪದಲ್ಲಿ ದ್ರೌಪದಿಯನ್ನು ಹೇಗೆ ವಿಜಯವಧುವನ್ನಾಗಿಸಿಕೊಂಡನು ?

5. ಸಂಸ್ಕೃತಿಯ ವೈಶಿಷ್ಟ್ಯಗಳನ್ನು ವಿಶದಪಡಿಸಿ.

6. ವಿಜ್ಞಾನದ ನಿಲುವು ಎಂತಹುದು ?

IV. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಇಪ್ಪತ್ತು ಸಾಲುಗಳಿಗೆ ಮೀರದಂತೆ ಉತ್ತರಿಸಿ : $1 \times 8 = 8$

1. ಕುಡುಕ ಕರಿಯಪ್ಪನ ದಾರುಣ ಕತೆಯನ್ನು ವಿವರವಾಗಿ ಬರೆಯಿರಿ.

2. ನೀರಿನ ಉಪಯೋಗಗಳೇನು ? ವಿಶದಪಡಿಸಿ.

3. ಗಂಗೆ ಗೌರಿ ಇಬ್ಬರಿಗೂ ಆದ ಜಗಳವನ್ನು ವಿವರಿಸಿ.

V. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಇಪ್ಪತ್ತು ಸಾಲುಗಳಿಗೆ ಮೀರದಂತೆ ವಿವರವಾಗಿ ಉತ್ತರಿಸಿ : $1 \times 10 = 10$

1. ನಾಗಿ ಕಥನ ಕವನದ ಸಾರಾಂಶವನ್ನು ಬರೆಯಿರಿ.

2. ಕುಂತಿ ಮಾದ್ರಿಯರ ಸಂಭಾಷಣೆಯನ್ನು ವಿವರವಾಗಿ ನಿರೂಪಿಸಿ.

3. ಸೀತಾ ಪರಿತ್ಯಾಗವನ್ನು ಎಚ್.ಎಸ್. ವೆಂಕಟೇಶಮೂರ್ತಿಯವರು ಹೇಗೆ ನಿರೂಪಿಸಿದ್ದಾರೆ ?

VI. ಈ ಪದ್ಯಗಳನ್ನು ಪೂರ್ತಿ ಮಾಡಿ : $2 \times 5 = 10$

1. ಎಲೆಗಳ ಮೇಲೆ ..............................................

..................................................................

..................................................................

..................................................................

..................................................................

........................................................ ಇಲ್ಲಿಗೆ ತಂದು.

2. ತುಪ್ಪದ ಸವಿಗೆ ..............................................

..................................................................

..................................................................

........................................................ ನಿಮ್ಮ ಧರ್ಮ.

www.StudentBounty.com
Homework Help & Pastpapers
StudentBounty.com

VII. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಸಂದರ್ಭ ಸಹಿತ ವಿವರಿಸಿ : 2 × 5 = 10

1. ಧರೆ ಮೆಚ್ಚದಣ್ಣಾ ಸೋದರರ ಕಾಳಗಕೆ.

2. ಪರೋಪಕೃತಿಗಲ್ಲದ ಮನುಜನ ಬಾಳ್ವೆಣಬುರಿದ ಬೂದಿಯಂತಪ್ಪುದು.

3. ಸಮಸ್ತೈಶ್ವರ್ಯವದು ತೃಣವಾಯ್ತು ಭೂಪತಿಗೆ.

4. ನರರ ನಡುವಿನಡ್ಡ ಗೋಡೆಗಳನು ಕುಟ್ಟಿ ಕೆಡಹುವೆವು

VIII. A) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : 2 × 5 = 10

1. ಯಣ್ ಸಂಧಿ ಅಥವಾ ವೃದ್ಧಿ ಸಂಧಿಯನ್ನು ಉದಾಹರಣೆ ಸಹಿತ ವಿವರಿಸಿ.

2. ತತ್ಪುರುಷ ಸಮಾಸ ಅಥವಾ ದ್ವಂದ್ವ ಸಮಾಸವನ್ನು ಉದಾಹರಣೆ ಸಹಿತ ವಿವರಿಸಿ.

3. ಉಪಮಾಲಂಕಾರ ಅಥವಾ ಶ್ಲೇಷಾಲಂಕಾರವನ್ನು ಉದಾಹರಣೆ ಸಹಿತ ವಿವರಿಸಿ.

4. ಕಂದ ಪದ್ಯ ಅಥವಾ ಸಾಂಗತ್ಯವನ್ನು ಉದಾಹರಣೆ ಸಹಿತ ವಿವರಿಸಿ.

B) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : 5 × 1 = 5

| | | | |
|---|---|---|---|
| 1. | ರಂಗವಲ್ಲಿ | — | ಕೆ.ಎಸ್. ನರಸಿಂಹಸ್ವಾಮಿ |
| 2. | ಮನೆಯಿಂದ ಮನೆಗೆ | — | ಕುವೆಂಪು |
| 3. | ನಾಗಿ | — | ದ.ರಾ. ಬೇಂದ್ರೆ |
| 4. | ಬೆಳಕು | — | ಸಿದ್ಧಲಿಂಗಯ್ಯ |
| 5. | ಸಾವಿರಾರು ನದಿಗಳು | — | ಪು.ತಿ. ನರಸಿಂಹಾಚಾರ್ |

IX. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : 15 × 1 = 15

1. ಗಣೇಶ ಎಂಬುದು ಯಾವ ಸಂಧಿ ?

ಅ) ಗುಣ ಸಂಧಿ ಆ) ಆದೇಶ ಸಂಧಿ ಇ) ಆಗಮ ಸಂಧಿ

2. ಹೆಬ್ಬಾಗಿಲು ಎಂಬುದು ಯಾವ ಸಮಾಸ ?

ಅ) ದ್ವಿಗು ಆ) ಕರ್ಮಧಾರಯ ಇ) ಅಂಶಿ

3. ಪುಸ್ತಕ ಪದದ ತದ್ಭವ ರೂಪವೇನು ?

ಅ) ಒತ್ತಿಗೆ ಆ) ಹೊತ್ತಗೆ ಇ) ಬಿತ್ತಿಗೆ

4. ಶ್ರೀಕೃಷ್ಣನಿಗೆ ತನ್ನ ದೇಹದ ಅರ್ಧಭಾಗವನ್ನು ಕೊಯ್ದುಕೊಟ್ಟವನು ಯಾರು ?

ಅ) ಕಪಿಧ್ವಜ ಆ) ಮಯೂರಧ್ವಜ ಇ) ಸರ್ಪಧ್ವಜ

[ Turn over

StudentBounty.com
www.StudentBounty.com
Homework Help & Pastpapers

StudentBounty.com



5. ಬವಣೆ ಪದದ ಅರ್ಥವೇನು ?

ಅ) ತೊಂದರೆ ಆ) ಸುಖ ಇ) ಸಂತೋಷ

6. 'ಕುಡುಕ ಕರಿಯಪ್ಪ' ಎಂಬ ಕಥೆಯನ್ನು ಬರೆದವರು ಯಾರು ?

ಅ) ಬಂಕಾಪುರ ಆ) ಸುಂಕಾಪುರ ಇ) ಟೊಂಕಾಪುರ

7. ಪುಷ್ಪಶರ ಎಂಬುದು ಯಾರ ಹೆಸರು ?

ಅ) ಇಂದ್ರ ಆ) ವರುಣ ಇ) ಮನ್ಮಥ

8. ಮಧುವ್ರತ ಎಂಬುದು ಯಾರ ಹೆಸರು ?

ಅ) ಜೇನು ನೊಣ ಆ) ಮಣ್ಣುಹುಳು ಇ) ಇರುವೆ

9. ಗೌರಮ್ಮನ ಮದುವೆ ಎಂಬುದು

ಅ) ಜಾನಪದ ಗೀತೆ ಆ) ಭಾವಗೀತೆ ಇ) ಶೋಕ ಗೀತೆ

10. ಸಾರ್ಥಕ ಪದದ ವಿರುದ್ಧಾರ್ಥ ಪದವೇನು ?

ಅ) ವ್ಯರ್ಥ ಆ) ಪದಾರ್ಥ ಇ) ವಾಕ್ಯಾರ್ಥ

11. ಇದ್ದವರಿಗೆ ಒಂದು ಮನೆ, ಇಲ್ಲದವರಿಗೆ

ಅ) ಮೂರು ಆ) ಆರು ಇ) ನೂರು

12. ಸಮೃದ್ಧ ಪದದ ಅರ್ಥವೇನು ?

ಅ) ಕಡಿಮೆ ಆ) ಯಥೇಚ್ಛ ಇ) ಬೇಗ

13. ಊರೂರು ಎಂಬುದು ಯಾವ ಸಂಧಿ ?

ಅ) ಲೋಪ ಸಂಧಿ ಆ) ಆಗಮ ಸಂಧಿ ಇ) ಆದೇಶ ಸಂಧಿ

14. ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ ಯಾವುದು ?

ಅ) ಇಂದಿರಾಬಾಯಿ ಆ) ಮುನ್ನಾಬಾಯಿ ಇ) ಸ್ವರ್ಣಾಬಾಯಿ

15. ದ.ರಾ. ಬೇಂದ್ರೆಯವರ ಜನ್ಮಸ್ಥಳ ಯಾವುದು ?

ಅ) ಬೆಳವಾಡಿ ಆ) ಧಾರವಾಡ ಇ) ಮಂಗಳೂರು

---

www.StudentBounty.com
Homework Help & Pastpapers